# ಪರಿಮಳದ ಒಡತಿ ಜಾಲಾರಿ ಹೂ



ಸುಗಂಧ ತುಂಬಿಕೊಂಡಿರುವ ಜಾಲಾರಿ ಹೂಗಳ ಘಮ ಮೈಲುಗಳವರೆಗೂ ಹರಡಬಲ್ಲದು. ಕಲ್ಲು ಗುಡ್ಡಗಳ ನಡುವೆ ತಾವು ರೂಪಿಸಿಕೊಳ್ಳುವ ಈ ಮರ, ಕ್ವಾರಿಗಳಿಂದಾಗಿ ಹೇಳಹೆಸರಿಲ್ಲದಂತಾಗುತ್ತಿದೆ.

■ ವಿನು ಗಂಗೆ

ಶಿರಸಿ ಕಡೆಯ ಅಪ್ಪಟ ಮಲೆನಾಡಿನ ನನ್ನ ಹಿರಿಯ ಸ್ನೇಹಿತರಾದ ರಮಾಕಾಂತ ಹೆಗ್ಗಡೆಯವರನ್ನು ಹೀಗೆ ಒಮ್ಮೆ ಮಾತನಾಡಿಸುತ್ತಾ, 'ಸರ್, ಕೆಟ್ಟ ವಾಸನೆಯನ್ನು ಸೂಸುವ ಒಂದು ಮರವಿದೆಯಲ್ಲ, ಅದರ ಬೀಜ ಸಿಗಬಹುದೇ' ಎಂದು ಕೇಳಿದೆ.

ಮರಗಳ ಬಗೆಗಿನ ನನ್ನ ಕುತೂಹಲವನ್ನು ಅರಿತಿರುವ ಅವರು, 'ದುರ್ವಾಸನೆಯ ಮರವನ್ನು ಹುಡುಕಿ ಬೆಳೆಯುವ ನೀವು, ಸುವಾಸನೆಗೆ ಅಪ್ರತಿಮ ಎನಿಸುವಂಥ ಮರವೊಂದಿದೆ, ಅದನ್ನು ಬೆಳೆಯಬಾರದೇ? ಅದರ ಸುವಾಸನೆಯನ್ನು ತುಮಕೂರಿನ ಬೆಟ್ಟಗಳ ಕಡೆ ಒಮ್ಮೆ ಹೋಗಿ ಆಘ್ರಾಣಿಸಿ ನೋಡಿ' ಎಂದರು.

ತುಮಕೂರಿನ ಮಿತ್ರರಿಗೆಲ್ಲ ಕರೆ ಮಾಡಿದೆ. ಆಗ ತಿಳಿಯಿತು, ಜಾಲಗರಿಯ ಘಮದ ಪರಿ. ಶಿವರಾತ್ರಿ ಸಮಯದಲ್ಲಿ ಜಾಲಾರಿ (ಜಾಲಗರಿ) ಹೂ ಅರಳುವಾಗ ದೇವಾನುದೇವತೆಗಳು ಆ ಮರದ ರೆಂಬೆಗಳಲ್ಲಿ ಕುಳಿತಿರುತ್ತಾರೆ ಎಂಬ ಮಾತು ತುಮಕೂರಿನ ಹಳ್ಳಿಗಳಲ್ಲಿ ಪ್ರಚಲಿತವಿದೆ. ಇದರ ವೈಜ್ಞಾನಿಕ ಹೆಸರು **Shorea Roxburgi.** ಭಾರತ, ಮಲೇಷ್ಯಾ, ಥಾಯ್ಲೆಂಡ್ ಹಾಗೂ ಬರ್ಮಾ ಇದರ ಆವಾಸ ಸ್ಥಾನ.

ಜಾಲಗರಿ ಮರ ಮಲೆನಾಡಿನ ಕಡೆ ಎಲ್ಲಿಯೂ ಇಲ್ಲ. ಇದಕ್ಕೆ ಬೇಕಿರುವುದು ಕಲ್ಲುಗುಡ್ಡಗಳ ನಡುವಿನ ಜಾಗ. ಆದರೆ ರಾಮನಗರ, ಬಳ್ಳಾರಿ ಕಲ್ಲುಗುಡ್ಡಗಳಲ್ಲಿ ಇವು ಇರುವ ಮಾಹಿತಿ ಇಲ್ಲ.

ಜಾಲಗರಿಯ ಮಹಿಮೆ ತಿಳಿದ ನಂತರ, ಶಿರಾದಲ್ಲಿ ತೋಟ ಮಾಡಿಕೊಂಡಿದ್ದ ನಮ್ಮ ನಿವೃತ್ತ ಅಧಿಕಾರಿ ರಾಮಕೃಷ್ಣಯ್ಯನವರಿಗೆ (ಈಚೆಗೆ ನಿಧನರಾದರು) ಕರೆ ಮಾಡುವುದಕ್ಕೂ, ಅವರೆದುರು ಕಂಚಿರಾಯಸ್ವಾಮಿ ಬೆಟ್ಟದ ಗುಡಿಯ ಅರ್ಚಕರು ಬರುವುದಕ್ಕೂ ಸರಿಯಾಯಿತು. ಅರ್ಚಕರು ಅವರ ಬೇಡಿಕೆಗೆ ಸ್ಪಂದಿಸಿ ಗುಡಿ ಬಳಿಯ ಜಾಲಗರಿ ಮರದಿಂದ ಬೀಜ ತಂದುಕೊಟ್ಟರು.

ಜಾಲಗರಿಯ ಬೀಜದ ಜೀವಶಕ್ತಿ ಇರುವುದು ಒಂದು ವಾರ ಮಾತ್ರ. ಹಾಗಾಗಿ ರಾಮಕೃಷ್ಣಯ್ಯನವರು ಬೀಜಗಳನ್ನು ನನಗೆ ಶೀಘ್ರ ತಲುಪಿಸಬೇಕಿತ್ತು. ಅದು 2020ರ ಮೇ ತಿಂಗಳ ಕೊನೆಯ ವಾರ. ದೇಶಾದ್ಯಂತ ಕೊರೊನಾ ಲಾಕ್‌ಡೌನ್ ಇದ್ದ ಸಮಯ. ಯಾವುದೇ ಅಂಚೆ ಸೇವೆ ಲಭ್ಯವಿರಲಿಲ್ಲ. ಅದೇ ಸಮಯಕ್ಕೆ ಮಹಮದ್ ಪಾಶಾ ಎಂಬ ನಮ್ಮ ತುಮಕೂರಿನ ಸಹೋದ್ಯೋಗಿ ರಾಮಕೃಷ್ಣಯ್ಯನವರಿಗೆ ಅಕಸ್ಮಾತ್ ಭೇಟಿಯಾಗಿ, ಬೀಜಗಳು ಅವರಿಗೆ ಹಸ್ತಾಂತರವಾದವು. ಉಳಿದ 5 ದಿನ ಕಳೆಯುವಷ್ಟರಲ್ಲಿ ನನಗೆ ಬೀಜ ತಲುಪಿಸುವ ಜವಾಬ್ದಾರಿ ಪಾಶಾ ಅವರ ಹೆಗಲೇರಿತು. ಎರಡು ದಿನ ಕೊರಿಯರ್ ಕಚೇರಿಯ ಮುಚ್ಚಿದ ಬಾಗಿಲು ನೋಡಿ ಹಿಂದಿರುಗಿದ ಪಾಶಾ ಅವರಿಗೆ, ಮೂರನೇ ದಿನ ಕಚೇರಿಯ ತೆರೆದ ಬಾಗಿಲು ಭಾರ ಇಳಿಸುವ ಸಾಧನದಂತೆ ಕಂಡಿತ್ತು. ಸರಿಯಾಗಿ ಆರನೇ ದಿನ ನನ್ನ ಕೈ ಸೇರಿದ ಜಾಲಗರಿ ಬೀಜಗಳು ಐದು ಸಸಿಯಾದವು. ಕಿಲೋ ಮೀಟರ್‌ಗಟ್ಟಲೆ ಹರಡುವ ಸುಗಂಧಕ್ಕೆ ದೇವಾನುದೇವತೆಗಳನ್ನು ಸ್ವರ್ಗದಿಂದ ಕೆಳಗೆ ಕರೆತರುವ ಸಾಮರ್ಥ್ಯವಿರುವ ಜಾಲಾರಿ ಹೂಗಳನ್ನು ನೋಡಲೇಬೇಕೆಂಬ ಆಸೆ ಅಂದಿನಿಂದ ನನ್ನನ್ನು ಕಾಡತೊಡಗಿತು.

ಕಳೆದ ವಾರ ಶಿವಮೊಗ್ಗಕ್ಕೆ ಮನೆಯವರೆಲ್ಲ ಮದುವೆಗೆ ಹೋಗುವ ಸಂದರ್ಭ. ಕಿಬ್ಬನಹಳ್ಳಿ ಕ್ರಾಸ್ ಬಳಿ ಬರುತ್ತಿದ್ದಂತೆ ಜಾಲಗರಿಯ ನೆನಪು ಮತ್ತೆ ಕಾಡಿತು. ನಮ್ಮ ಜೊತೆಗಿದ್ದ ಶಂಭು, ಅವರ ನೆಂಟರ ಟೀ ಅಂಗಡಿಯಲ್ಲಿ ವಿಚಾರಿಸಿದರೆ ಸಿಗಬಹುದು ಎಂದರು. ಅಲ್ಲಿಗೆ ಹೋಗಿ ವಿಚಾರಿಸಿದಾಗ ಜಾಲಗರಿ ಬಗ್ಗೆ ಅವರಲ್ಲಿ ಹೆಚ್ಚಿನ ಮಾಹಿತಿ ಇರಲಿಲ್ಲ. ಅಲ್ಲೇ ಮಾತು ಕೇಳಿಸಿಕೊಳ್ಳುತ್ತಾ ಇದ್ದ ಬಸವರಾಜು ಎಂಬ ಅರವತ್ತರ ಆಸುಪಾಸಿನ ವ್ಯಕ್ತಿಯೊಬ್ಬರು 'ಓ ಜಾಲಗರಿ ನಮ್ಮ ಗುಡ್ಡದಾಗೆ ಬೇಕಾದಷ್ಟವೆ. ಪ್ರಪಂಚದಲ್ಲೇ ಎಲ್ಲೂ ಇಲ್ಲ, ಯಂಗೆ ಘಮಗುಡ್ತದೆ ಗೊತ್ತಾ?' ಎಂದರು.



ಆ ಮಾತುಗಳು ಉತ್ಪ್ರೇಕ್ಷೆಯಂತೆ ಧ್ವನಿಸಿದರೂ, ಅದು ಬಹುಮಟ್ಟಿಗೆ ಸತ್ಯ ಎಂಬುದು ನನಗೆ ಗೊತ್ತಿತ್ತು. 'ಅದೆಲ್ಲಿದೆ, ನಮ್ಮೊಡನೆ ಬಂದು ತೋರಿಸುವಿರಾ?' ಎಂದಾಗ 'ಓ! ಅದಕ್ಕೇನಂತೆ ಇಲ್ಲೇ ಅದೆ, ತೋರುಸ್ತೀನಿ' ಎಂದವರನ್ನು ನಮ್ಮೊಡನೆ ಕರೆದುಕೊಂಡು ಹೊರಟೆವು. ಸ್ವಲ್ಪ ದೂರ ಹೋಗುತ್ತಿದ್ದಂತೆ, ನಾವು ಜಾಲಾರಿಯ ಜಾಡಿನಲ್ಲಿ ಇದ್ದೇವೋ ಇಲ್ಲವೋ ಎಂಬ ಅನುಮಾನವೂ ಮೂಡಿತು.

ಇಲ್ಲೇ ಇಲ್ಲೇ ಅಂದ ಗುಡ್ಡ ಸುಮಾರು 15 ಕಿ.ಮೀ. ದೂರ ಹೋದರೂ ಸಿಗಲಿಲ್ಲ. ದಾರಿ ತಪ್ಪಿದೆ, ಮತ್ತೆ ವಾಪಸು ಬರಬೇಕು ಎಂದಾಗ ಅನುಮಾನ ಬಲವಾಯಿತು. ಸಂಜೆ ಹೊತ್ತಿಗೆ ಮದುಮಗನ ಸೂಟನ್ನು ತಲುಪಿಸುವ ಜವಾಬ್ದಾರಿ ನಮ್ಮ ಮೇಲಿತ್ತು. ಆದರೆ ಬಹಳ ದೂರ ಬಂದಾಗಿದ್ದರಿಂದ ಜಾಲಗರಿ ನೋಡದೇ ಹಿಂದಿರುಗುವ ಹಾಗೂ ಇರಲಿಲ್ಲ. ಕೊನೆಗೆ ಅಲ್ಲಿ ಕುರಿ ಕಾಯುವವರನ್ನು ಕೇಳಿ, ಅಂತೂ ಇಂತೂ 20 ಕಿ.ಮೀ. ಕ್ರಮಿಸಿದ ನಂತರ ಗುಡ್ಡದ ಬುಡದಲ್ಲಿ ಜಾಲಾರಿ ಮರದ ನೆರಳಿಗೆ ಬಂದಾಗ ಮನಸ್ಸಿಗೆ ದೇವರ ದರ್ಶನ ಪಡೆದ ಸಮಾಧಾನವಾಗಿತ್ತು.

ಪ್ರಪಂಚದಲ್ಲೇ ಇಲ್ಲದ್ದು, ತಮ್ಮ ಊರಿನ ಗುಡ್ಡದಲ್ಲಿ ಇರುವುದೂ, ಬಹಳಷ್ಟು ಜನರಿಗೆ ಗೊತ್ತೇ ಇಲ್ಲದ್ದನ್ನು ತಾನು ತೋರಿಸಿದರ ಬಗ್ಗೆ